ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

**CC No.413/2017**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಬೀಬ್ ಉಲ್ಲಾ ಖಾನ್ |
| ತಂದೆಯ ಹೆಸರು | : | ಲೇಟ್ ಬುಡಾನ್ ಖಾನ್ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ನಿವೃತ್ತ ಶಿಕ್ಷಕ |
| ವಾಸಸ್ಥಳ | : | ಚನ್ನಪಟ್ಟಣ |

ಸ್ವಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ : ದಿಃ 13.08.2025

ಚಾಸಾ 1, 2 ಮತ್ತು 4 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ದಿಃ 17.12.2015 ರಂದು ಮದ್ಯಾಹ್ನ ಗಂಟೆ ಸಮಯದಲ್ಲಿ ಚನ್ನಪಟ್ಟಣದ ಶೇರು ಹೋಟೆಲ್ ಪಕ್ಕದಲ್ಲಿರುವ ಐ ಬಿ ಎನ್ ಮೆಡಿಕಲ್ ಸ್ಟೋರ್ ಮತ್ತು ಪಕ್ಕದಲ್ಲಿರುವ ಪೆಟ್ಟಿ ಅಂಗಡಿ ಇದ್ದು , ಮೆಡಿಕಲ್ ಸ್ಟೋರ್ ಗೆ ಅಂದರೆ ರಸ್ತೆಯ ಬದಿಗೆ ಪೆಟ್ಟಿ ಅಂಗಡಿ ಆರೋಪಿತರಿಗೆ ಸೇರಿದ್ದು, ಸದರಿ ಪೆಟ್ಟಿ ಅಂಗಡಿಯು ಮೆಡಿಕಲ್ ಸ್ಟೋರ್ ಗೆ ಅಡ್ಡ ಇದ್ದು, ಈ ಸಂಬಂಧ ಆರೋಪಿತರು ಮತ್ತು ಚಡಾಸಾ 1 ರವರ ನಡುವೆ ಗಲಾಟೆ ಆಗಿದ್ದುದಿಃ 17.12.2017 ರಂದು ಪೋಲೀಸರು ಐ ಬಿ ಎನ್ ಮೆಡಿಕಲ್ ಸ್ಟೋರ್ ನ ಹತ್ತಿರ ಬಂದು ನನ್ನ ಹಾಗೂ ಚಾಸಾ 4 ರವರ ಸಮಕ್ಷಮ ಸ್ಥಳ ಮಹಜರು ಕ್ರಮ ಜರುಗಿಸಿರುತ್ತಾರೆ. ಸ್ಥಳ ಮಹಜರನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2 (ಸಿ) ಎಂದು ಗುರುತಿಸಲಾಯಿತು. ಘಟನೆ ನಡೆಯಿತು ಎಂದು ಹೇಳಿದ ದಿನವೇ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿ 1 , 2 ಮತ್ತು 4 ರವರನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. 3 ನೇ ಆರೋಪಿ ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು 3 ನೇ ಆರೋಪಿಗೆ ಇ ಪಿ ಸಲ್ಲಿಸಿ ಸದರಿ ಆರೋಪಿಯ ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**CC 413/2017**

**ಸಿ.ಡಬ್ಲೂ.-03 / ಪಿ.ಡಬ್ಲೂ-03**

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ**

ಚಾಸಾ 1 ರವರು ನನಗೆ ಭಾಮೈದ ಆಗಬೇಕು ಎಂದರೆ ಸರಿ. ಚಾಸಾ 2 ಚಾಸಾ 1 ರವರ ಚಿಕ್ಕಮ್ಮನ ಮಗ. ಘಟನೆ ನಡೆದ ಕಾಲಕ್ಕೆ ನಾನು ಶಿಕ್ಷಣ ಇಲಾಖೆಯಲ್ಲಿ field worker ಆಗಿ ಕೆಲಸ ಮಾಡುತ್ತಿದ್ದೆ. ಪ್ರತಿದಿನ ಕಛೇರಿಗೆ 10.00 ಗಂಟೆಗೆ ಹಾಜರಾಗಿ ಸಹಿ ಮಾಡಿ ನಂತರ ಎಲ್ಲಾ ಶಾಲೆಗಳಿಗೆ ಭೇಟಿ ಕೊಡುವ ಉದ್ದೇಶ ಇರುತ್ತದೆ. ತಾವು ಮಹಜರಿಗೆ ಬರುವಂತೆ ಪೊಲೀಸರು ಆ ದಿನ ನೋಟೀಸು ಕೊಟ್ಟಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿಃ 14.12.2015 ರಂದು ನಾನು ಸರ್ಕಾರಿ ನಿರತ ಕರ್ತವ್ಯದಲ್ಲಿ ಇದ್ದೆ ಎಂದರೆ ಸರಿ. ಘಟನಾ ಸಂಬಂಧ ತಾವು ಸಾಕ್ಷಿದಾರರಾಗಿ ಹಾಜರಾಗಲು ತಮ್ಮ ಇಲಾಖೆಯಿಂದ ಪೂರ್ವಾನುಮತಿ ಪಡೆಯಬೇಕಾಗುತ್ತದೆ ಎಂದರೆ ಸರಿಯಲ್ಲ. ಸ್ಥಳ ಮಹಜರು ಚೆಕ್ಕು ಬಂದಿ ಹೇಳುವಿರಾ ಎಂದರೆ ಸಾಕ್ಷಿಯು ಹೇಳುತ್ತೇನೆ ಎನ್ನುತ್ತಾರೆ. ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮೆಡಿಕಲ್ ಸ್ಟೋರ್ , ಉತ್ತರಕ್ಕೆ five lights circle, ದಕ್ಷಿಣಕ್ಕೆ ಶೇರು ಹೋಟೆಲ್. ಮಹಜರಿನಲ್ಲಿ ಬರೆದಿರುವ ವಿಷಯ ತಮಗೆ ಗೊತ್ತಾ ಎಂದರೆ ಸಾಕ್ಷಿಯು ಪೊಲೀಸರು ಹೇಳಿದ್ದು ನಾನು ಅದನ್ನು ಕೇಳಿ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ಚಾಸಾ 1 ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿಲ್ಲ, ಪೋಲಿಸರು ಸ್ಥಳಕ್ಕೆ ಬಂದಿಲ್ಲ ನಾನು ಮಹಜರಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ1 ರವರು ನನ್ನ ಬಾಮೈದ ಆದುದರಿಂದ , ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.